KACD420026362025

HANUMANTHARAYAPPA B R Digitally signed by HANUMANTHARAYAPPA B R Date: 2026.07.07 09:39:05 +0530

Presented on : 29-09-2025
Registered on : 29-09-2025
Decided on : 04-07-2026
Duration : 0 years, 9 months, 5 days

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ
ನ್ಯಾಯಾಲಯ, ಹೊಳಲ್ಕೆರೆ

ಃಃ ಉಪಸ್ಥಿತರು ಃಃ
ಶ್ರೀ.ಹನುಮಂತರಾಯಪ್ಪ.ಬಿ.ಆರ್., ಬಿಎ.ಎಲ್.ಎಲ್.ಬಿ.,
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಯವರು, ಹೊಳಲ್ಕೆರೆ

ದಿನಾಂಕ **04** ನೇ ಜುಲೈ ಮಾಹೆ **2026** ನೇ ಇಸವಿ

ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ **1651/2025**

| | |
|---|---|
| ಪಿರ್ಯಾದುದಾರರು ಃ | ರಾಜ್ಯ ಪೋಲೀಸರು,<br>ಚಿತ್ರಹಳ್ಳಿಗೇಟ್ **ಪೋಲೀಸ್ ಠಾಣೆ.**<br>(ಪರವಾಗಿ ಃ- ಸ.ಸ.ಅ) |
| ಃ ವಿರುದ್ಧ ಃ | |
| ಆರೋಪಿತರು | 1.ಮಾರ್ಕಂಡೇಯ ತಂದೆ ಪೆನ್ನಯ್ಯ<br>ಸುಮಾರು 60 ವರ್ಷ<br>ಜಿರಾಯ್ತಿ ಕೆಲಸ<br><br>2. ಲಿಂಗೇಶ್ ತಂದೆ ಮಾರ್ಕೇಂಡಯ್ಯ<br>ಸುಮಾರು 34 ವರ್ಷಗಳು<br>ಇಬ್ಬರೂ ವಾಸಃ ನನ್ನಿವಾಳ ಗ್ರಾಮ<br>ಚಳ್ಳಕೆರೆ ತಾಲ್ಲೂಕು. |
| (ಆರೋಪಿಗಳ ಪರ ಶ್ರೀ ಜಿ.ಇ.ಆರ್., ವಕೀಲರು ಹಾಜರಾಗಿರುತ್ತಾರೆ) | |

| | |
|---|---|
| ಅಪರಾಧ ಮಾಡಿದ ದಿನಾಂಕ | **02/06/2025** |
| ಅಪರಾಧ ವರದಿ ಮಾಡಿದ ದಿನಾಂಕ | **10/06/2025** |
| ಆರೋಪಿತ | ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. |
| ವಿಚಾರಣೆ ಪ್ರಾರಂಭಿಸಿದ ದಿನಾಂಕ | **19/06/2026** |
| ವಿಚಾರಣೆ ಮುಕ್ತಾಯವಾದ ದಿನಾಂಕ | **19/06/2026** |
| ಆರೋಪಿಸಲ್ಪಟ್ಟ ಅಪರಾಧಗಳು | ಭಾ.ನ್ಯಾ.ಸಂ.ಕಲಂ**.352, 115(2), 74** ಸಹಕಲಂ **3(5)** |
| ತೀರ್ಪು ಘೋಷಣೆಯ ದಿನಾಂಕ | **04/07/2026** |
| ನ್ಯಾಯಾಧೀಶರ ಅಭಿಪ್ರಾಯ | ದೋಷಮುಕ್ತಗೊಳಿಸಲಾಗಿದೆ |

(ಹನುಮಂತರಾಯಪ್ಪ.ಬಿ.ಆರ್)
ಅಪರ ಸಿವಿಲ್ ನ್ಯಾಯಾಧೀಶರು
ಪ್ರ.ದ.ನ್ಯಾ.ದಂಡಾಧಿಕಾರಿರವರು, ಹೊಳಲ್ಕೆರೆ

## ::: ತೀರ್ಪು :::

ಚಿತ್ರಹಳ್ಳಿಗೇಟ್ ಪೋಲೀಸ್ ಠಾಣೆಯವರು 1 ಮತ್ತು 2 ನೇ ಆರೋಪಿಗಳ ವಿರುದ್ಧ ಭಾ.ನ್ಯಾ.ಸಂ.ಕಲಂ.352, 115(2), 74 ಸಹಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕಾಗಿ ಆರೋಪ ಪಟ್ಟಿ ಸಲ್ಲಿಸಿರುತ್ತಾರೆ.

ಅಭಿಯೋಜನೆಯ ಪ್ರಕರಣದ ಸಾರಾಂಶ ಏನೆಂದರೆ:-

**2.** ದಿನಾಂಕ 02/06/2025 ರಂದು ಬೆಳಿಗ್ಗೆ 11-30 ಗಂಟೆ ಸಮಯದಲ್ಲಿ ಹೊಳಲ್ಕೆರೆ ತಾಲ್ಲೂಕು ಬಂಜಗೊಂಡನಹಳ್ಳಿ ಗ್ರಾಮದ ದೋಷಾ ಸಾಕ್ಷಿ-1 ರವರ ತವರು ಮನೆಯಲ್ಲಿ ಆರೋಪಿತರು ದೋಷಾ ಸಾಕ್ಷಿ-1 ರವರಿಗೆ ಹಣದ ವಿಚಾರದಲ್ಲಿ ಅವ್ಯಾಚ ಶಬ್ದಗಳಿಂದ ಬೈದಾಡಿ ಕೈ ಕಾಲುಗಳಿಂದ ಮೈಕೈಗೆ ಹೊಡೆದು ನೋವುಂಟುಪಡಿಸಿ ದೋಷಾ ಸಾಕ್ಷಿ-1 ರವರು ತೊಟ್ಟಿದ್ದ ನೈಟಿಯನ್ನು ಹಿಡಿದು ಎಳೆದಾಡಿ ಅವರ ಮಾನಕ್ಕೆ ಚ್ಯುತಿಯನ್ನುಂಟು ಮಾಡಿದ್ದರಿಂದ ದೋ ಸಾಕ್ಷಿ-1 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳು ಉಂಟಾಗಿರುತ್ತದೆ

ಎಂದು ಆ ಪ್ರಕಾರ ಆರೋಪಿತರ ವಿರುದ್ಧ ಭಾ.ನ್ಯಾ.ಸಂ.ಕಲಂ.352, 115(2), 74 ಸಹಲಂ 3(5) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಕ್ಕಾಗಿ ಆರೋಪ ಪಟ್ಟಿ ಸಲ್ಲಿಸಿರುತ್ತಾರೆ.

3. ಆರೋಪಿತರು ವಕೀಲರ ಮೂಲಕ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಆರೋಪಿಗಳಿಗೆ ದೋಷಾರೋಪಣೆ ಪಟ್ಟಿಯ ದಾಖಲೆಗಳನ್ನು ಬಿ.ಎನ್.ಎಸ್ ಕಲಂ.230 ರ ಅಡಿಯಲ್ಲಿ ಒದಗಿಸಲಾಯಿತು. ಆರೋಪಿಗಳಿಗೆ ಆಪಾದನೆಯ ಸಾರಾಂಶಗಳನ್ನು ಅವರಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದ್ದು ಅವರೂ ವಿಚಾರಣೆಯನ್ನು ಬಯಸಿರುತ್ತಾರೆ.

4. ಆರೋಪಿತರ ಮೇಲಿನ ಆರೋಪಗಳನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯವರು ಚಾಸಾ.1 ರವರನ್ನು ಪ್ರಾಸಾ.1 ರಂತೆ ಅಭಿಯೋಜನೆಯ ಸಾಕ್ಷಿದಾರರಾಗಿ ಹೇಳಿಕೆಯನ್ನು ನೀಡಿದ್ದು, ನಿಪಿ.1 ರಿಂದ ನಿಪಿ.3 ರಂತೆ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಪ್ರಾಸಾ.1 ರವರು ತಮ್ಮ ಸಾಕ್ಷ್ಯದಲ್ಲಿ ಪ್ರತಿಕೂಲ ಸಾಕ್ಷಿಯಾಗಿ ಪರಿವರ್ತನೆಯಾಗಿದ್ದು, ಅಭಿಯೋಜನೆಯವರು ಸದರಿ ಸಾಕ್ಷಿಯನ್ನು ಪಾಟೀ ಸವಾಲಿಗೆ ಒಳಪಡಿಸಿದ್ದು, ಯಾವುದೇ ಪೂರಕ ಉತ್ತರಗಳನ್ನು ಪಡೆದಿರುವುದಿಲ್ಲ, ಪ್ರಕರಣದ ಮುಖ್ಯ ಸಾಕ್ಷಿಯಾದ ಪ್ರಾಸಾ.1 ರವರು ಪ್ರತಿಕೂಲ ಸಾಕ್ಷಿಯಾದ ಕಾರಣ ಮತ್ತು ಆರೋಪಿತರ ವಿರುದ್ಧ ಆರೋಪ ಹೊರಿಸುವಂತಹ ಯಾವುದೇ ಹೇಳಿಕೆಯನ್ನು ನೀಡಿಲ್ಲದಿರುವುದರಿಂದ ಅಭಿಯೋಜನೆಯ ಪರ ಉಳಿದ ಸಾಕ್ಷಿಯ ಹೇಳಿಕೆಯನ್ನು ಪಡೆಯುವ ಬಗೆಗಿನ ಅಭಿಯೋಜನೆಯ ಮನವಿಯನ್ನು ನ್ಯಾಯಾಲಯವು ತಿರಸ್ಕರಿಸಿ ಉಳಿದ ಸಾಕ್ಷಿದಾರರನ್ನು ಪ್ರಕರಣದಿಂದ ಕೈಬಿಟ್ಟು ಮುಂದುವರೆದು ಸಾಕ್ಷಿದಾರರ ವಿಚಾರಣೆ ಇಲ್ಲ ಎಂದು ಅಭಿಯೋಜನೆಯ ವಿಚಾರಣೆಯನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಅದೇರೀತಿ ಸಾಕ್ಷಿದಾರರ ಹೇಳಿಕೆಯಲ್ಲಿ ಆರೋಪಿಗಳ ವಿರುದ್ಧ ಯಾವುದೇ ದೋಷಾರೋಪಣೆ ಕಂಡುಬಂದಿಲ್ಲದೇ ಇದ್ದ ಕಾರಣ ಬಿ.ಎನ್.ಎಸ್.ಎಸ್.351 ರ ಅಡಿಯಲ್ಲಿ ಆರೋಪಿಗಳ ಹೇಳಿಕೆಯನ್ನು ಮನ್ನಗೊಳಿಸಲಾಗಿರುತ್ತದೆ.

5. ಅಭಿಯೋಜನೆಯ ಪರ ಮತ್ತು ಆರೋಪಿಗಳ ಪರ ವಕೀಲರ ವಾದ ವಿವಾದವನ್ನು ಕೇಳಲಾಯಿತು.

6. ಈ ಪ್ರಕರಣದಲ್ಲಿ ಪರಿಗಣನೆಗೆ ಉದ್ಭವಿಸುವ ಅಂಶವೇನೆಂದರೆಃ

1. ಚಿತ್ರಹಳ್ಳಿಗೇಟ್ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಹೊಳಲ್ಕೆರೆ ತಾಲ್ಲೂಕು ದಿನಾಂಕ 02/06/2025 ರಂದು ಬೆಳಿಗ್ಗೆ 11-30 ಗಂಟೆ ಸಮಯದಲ್ಲಿ ಬಂಜಗೊಂಡನಹಳ್ಳಿ ಗ್ರಾಮದ ಚಾಸಾ-1 ರವರು ತವರು ಮನೆಯಲ್ಲಿ ಆರೋಪಿತರು ಚಾಸಾ-1 ರವರಿಗೆ ಹಣದ ವಿಚಾರದಲ್ಲಿ ಶಾಂತಿಭಂಗೊಳಿಸುವ ಉದ್ದೇಶದಿಂದ ಅವ್ಯಾಚ ಶಬ್ದಗಳಿಂದ ಬೈದಾಡಿದ್ದು, ಆ ಮೂಲಕ ಭಾ.ನ್ಯಾ.ಸಂ.ಕಲಂ.**352** ಸಹಕಲಂ **3(5)** ರ ಪ್ರಕಾರ ದಂಡನೀಯ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುವವರೇ **?**

2. ಅದೇ ದಿನಾಂಕ, ಅದೇ ಸಮಯ ಮತ್ತು ಸ್ಥಳದಂದು ಆರೋಪಿತರು ಸಮಾನ ಉದ್ದೇಶದಿಂದ ಹೊಂದಿ, ಚಾಸಾ-1 ರವರಿಗೆ ಬೈದಾಡಿದ್ದಲ್ಲದೇ ಕೈ ಕಾಲುಗಳಿಂದ ಮೈಕೈಗೆ ಹೊಡೆದು ನೋವುಂಟುಪಡಿಸಿದ್ದು, ಆ ಮೂಲಕ ಭಾ.ನ್ಯಾ.ಸಂ.ಕಲಂ.**115(2)** ಸಹಕಲಂ **3(5)** ರ ಪ್ರಕಾರ ದಂಡನೀಯ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುವವರೇ **?**

3. ಕೊನೆಯದಾಗಿ ಅದೇ ದಿನಾಂಕ, ಅದೇ ಸಮಯ ಮತ್ತು ಸ್ಥಳದಂದು ಆರೋಪಿತರು ಸಮಾನ ಉದ್ದೇಶದಿಂದ ಹೊಂದಿ, ಚಾಸಾ-1 ರವರು ತೊಟ್ಟಿದ್ದ ನೈಟಿಯನ್ನು ಹಿಡಿದು ಎಳೆದಾಡಿ ಸಾರ್ವಜನಿಕವಾಗಿ ಅವರ ಮಾನಕ್ಕೆ ಚ್ಯುತಿಯನ್ನುಂಟು ಮಾಡಿದ್ದು, ಆ ಮೂಲಕ ಭಾ.ನ್ಯಾ.ಸಂ.ಕಲಂ.**74** ಸಹಕಲಂ **3(5) ರ** ಪ್ರಕಾರ ದಂಡನೀಯ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುವವರೇ **?**

4. ಯಾವ ಆದೇಶ **?**

7. ಮೇಲ್ಕಂಡ ವಿವಾದಾಂಶಕ್ಕೆ ಈ ಕೆಳಕಂಡ ಕಾರಣಗಳಿಗಾಗಿ ಉತ್ತರಿಸುತ್ತೇನೆ.

ಅಂಶ 1ಃ ನಕಾರಾತ್ಮಕವಾಗಿ
ಅಂಶ 2ಃ ನಕಾರಾತ್ಮಕವಾಗಿ
ಅಂಶ 3ಃ ನಕಾರಾತ್ಮಕವಾಗಿ
ಅಂಶ 4ಃ ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿಃ-

## ::: ಕಾರಣಗಳು :::

8. ಅಂಶ 1 ರಿಂದ 3- ಈ ಮೇಲ್ಕಂಡ ಅಂಶಗಳು ಒಂದಕ್ಕೊಂದು ಪೂರಕ ಸಂಗತಿಗಳನ್ನು ಒಳಗೊಂಡಿರುವುದರಿಂದ ವಸ್ತು ವಿಷಯದ ಪುನರಾವರ್ತನೆಯನ್ನು ತಪ್ಪಿಸಲು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿರುತ್ತದೆ.

9. ಅಭಿಯೋಜನೆ ಪ್ರಕರಣದ ಸಾರಾಂಶ ದಿನಾಂಕ 02/06/2025 ರಂದು ಬೆಳಿಗ್ಗೆ 11-30 ಗಂಟೆ ಸಮಯದಲ್ಲಿ ಹೊಳಲ್ಕೆರೆ ತಾಲ್ಲೂಕು ಬಂಜಗೊಂಡನಹಳ್ಳಿ ಗ್ರಾಮದ ದೋಷಾ ಸಾಕ್ಷಿ-1 ರವರ ತವರು ಮನೆಯಲ್ಲಿ ಆರೋಪಿತರು ದೋಷಾ ಸಾಕ್ಷಿ-1 ರವರಿಗೆ ಹಣದ ವಿಚಾರದಲ್ಲಿ ಅವ್ಯಾಚ ಶಬ್ದಗಳಿಂದ ಬೈದಾಡಿ ಕೈ ಕಾಲುಗಳಿಂದ ಮೈಕೈಗೆ ಹೊಡೆದು ನೋವುಂಟುಪಡಿಸಿ ದೋಷಾ ಸಾಕ್ಷಿ-1 ರವರು ತೊಟ್ಟಿದ್ದ ನೈಟಿಯನ್ನು ಹಿಡಿದು ಎಳೆದಾಡಿ ಅವರ ಮಾನಕ್ಕೆ ಚ್ಯುತಿಯನ್ನುಂಟು ಮಾಡಿದ್ದರಿಂದ ದೋ.ಸಾಕ್ಷಿ-1 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳು ಉಂಟಾಗಿರುತ್ತದೆ ಎಂದು ಆ ಪ್ರಕಾರ 1 ಮತ್ತು 2 ನೇ ಆರೋಪಿತರ ವಿರುದ್ಧ ಭಾ.ನ್ಯಾ.ಸಂ.ಕಲಂ.352, 115(2), 74 ಸಹಲಂ 3(5) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಕ್ಕಾಗಿ ಆರೋಪ ಪಟ್ಟಿ ಸಲ್ಲಿಸಿರುತ್ತಾರೆ.

10. ಅಭಿಯೋಜನೆಯು ಆರೋಪಿತರ ವಿರುದ್ದ ಹೊರಿಸಿರುವ ಆರೋಪಗಳನ್ನು ರುಜುವಾತುಪಡಿಸುವ ಸಲುವಾಗಿ ಚಾಸಾ.1 ರವರನ್ನು ಪ್ರಾಸಾ.1 ಎಂಬುದಾಗಿ ಅಭಿಯೋಜನೆಯವರು ವಿಚಾರಣೆಗೆ ಒಳಪಡಿಸಿದ್ದು ಮೌಖಿಕ ಸಾಕ್ಷ್ಯ ನೀಡಿರುತ್ತಾರೆ. ಅದೇ ರೀತಿ ನಿಪಿ.1 ದೂರು ನಿಪಿ-2 ಸ್ಥಳ ಮಹಜರ್, ನಿಪಿ-3 ಪ್ರಾಸಾ-1 ರವರ ಹೇಳಿಕೆಯನ್ನು ಗುರುತಿಸಿಕೊಂಡಿರುತ್ತಾರೆ, ಚಾಸಾ.1 ರವರಾದ ಕಮಲಮ್ಮ ಪಿರ್ಯಾದುದಾರರಾಗಿದ್ದು, ಪ್ರಾಸಾ.1 ಎಂಬುದಾಗಿ ಸಾಕ್ಷ್ಯ ನುಡಿದಿದ್ದು ತಮ್ಮ ಮುಖ್ಯ ವಿಚಾರಣೆಯಲ್ಲಿ 1 ಮತ್ತು 2 ನೇ ಆರೋಪಿತರು ನನಗೆ ಅವ್ಯಾಚ ಶಬ್ದಗಳಿಂದ ಬೈದಿರುವುದಿಲ್ಲ, ಕೈ ಮತ್ತು ಕಾಲುಗಳಿಂದ ನನ್ನ ಮೈಕೈಗೆ ಹೊಡೆದು ನೋವುಂಟು ಮಾಡಿರುವುದಿಲ್ಲ, ನಾನು ತೊಟ್ಟಿದ್ದ ನೈಟಿಯನ್ನು ಹಿಡಿದು ಎಳೆದಾಡಿ ನನ್ನ ಮಾನಕ್ಕೆಚ್ಯುತಿ ಉಂಟಾಗುವ ರೀತಿ ವರ್ತಿಸಿರುವುದಿಲ್ಲ ನನಗೆ ಸದರಿ

ಹಲ್ಲೆ ಮಾಡಿದ್ದರಿಂದ ಯಾವುದೇ ಗಾಯಗಳು ಉಂಟಾಗಿರುವುದಿಲ್ಲ ನಾನು ಈ ಬಗ್ಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ ಎಂದು ಸಾಕ್ಷವನ್ನು ನುಡಿದಿದ್ದು, ದಿನಾಂಕ 10/06/2025 ರ ದೂರನ್ನು ನಿಪಿ-1 ಎಂದು ಹಾಗೂ ಅದರ ಸಹಿಯನ್ನು ನಿಪಿ-1 (ಎ) ಎಂದು ಗುರುತಿಸಿದ್ದು ನಿಪಿ-1 ರಲ್ಲಿ ಬರೆದಿರುವ ಸಂಗತಿಗಳು ತಿಳಿದಿರುವುದಿಲ್ಲ, ಎಂದು ನುಡಿದಿದ್ದು ಹಾಗೂ ದಿನಾಂಕ 11/06/2025 ರ ಮಹಜರ್ ರಲ್ಲಿರುವ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಿದ್ದು, ಸದರಿ ಸಹಿಗಳನ್ನು ಪೋಲಿಸ್ ಠಾಣೆಯಲ್ಲಿ ಮಾಡಿರುತ್ತೇನೆ ಸದರಿ ಸಹಿ ಮಾಡುವಾಗ ನನ್ನನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ ಪೋಲಿಸರ ಮುಂದೆ ಯಾವುದೇ ಮರು ಹೇಳಿಕೆ ನೀಡಿಲ್ಲ ಎಂದು ನುಡಿದಿರುತ್ತಾರೆ.

11. ಸಹಾಯ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪ್ರಾಸಾ.1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದ್ದು ಪಾಟೀ ಸವಾಲಿನಲ್ಲಿ 1 ನೇ ಆರೋಪಿ ಮಾವ ಮತ್ತು 2 ನೇ ಆರೋಪಿ ತನ್ನ ಗಂಡನಾಗಿರುವುದರಿಂದ ರಾಜೀ ಮಾಡಿಕೊಂಡಿರುತ್ತೇವೆ ಎಂದು ನುಡಿದಿರುವುದರಿಂದ ಆರೋಪಿತರ ವಿರುದ್ಧ ಆರೋಪಿಸಿರುವ ಅಪರಾಧಗಳನ್ನು ಸಾಭೀತುಪಡಿಸಲು ಆರೋಪ ಪಟ್ಟಿಯ ದಾಖಲಾತಿಗಳನ್ನು ಹಾಗೂ ಆರೋಪಪಟ್ಟಿಯ ಆರೋಪದ ಸಂಗತಿಗಳನ್ನು ಸಾಭೀತುಪಡಿಸುವಲ್ಲಿ ಪೂರಕ ದಾಖಲಾತಿಗಳನ್ನು ಗುರುತಿಸಿಕೊಳ್ಳುವಲ್ಲಿ ಹಾಗೂ ಮೌಖಿಕ ಸಾಕ್ಷ್ಯವನ್ನು ನೀಡಿ ಸಾಭೀತುಪಡಿಸುವಲ್ಲಿ ವಿಫಲರಾಗಿರುತ್ತಾರೆ. ಮುಖ್ಯ ಸಾಕ್ಷಿದಾರರಾದ ಪ್ರಾಸಾ.1 ರವರು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯವನ್ನು ನುಡಿದಿದ್ದು, ಆರೋಪಿತರ ವಿರುದ್ದ ಯಾವುದೇ ಆರೋಪ ಹೊರಿಸುವಂತಹ ಹೇಳಿಕೆಗಳನ್ನು ನೀಡಿರುವುದಿಲ್ಲ. ಅದೇರೀತಿ ಅಭಿಯೋಜಕರ ಪಾಟೀ ಸವಾಲಿನಲ್ಲಿಯೂ ಸಹ ಅಭಿಯೋಜನೆಯ ಸಲಹೆಗಳನ್ನು ಅಲ್ಲಗಳೆದಿರುತ್ತಾರೆ. ಮೇಲ್ಕಂಡ ಪ್ರಾಸಾ.1 ರವರ ಮೌಖಿಕ ಸಾಕ್ಷ್ಯದಲ್ಲಿ ಆರೋಪಿತರ ವಿರುದ್ಧ ಯಾವುದೇ ಸಾಕ್ಷ್ಯ ಕಂಡುಬಂದಿಲ್ಲದೇ ಇರುವುದರಿಂದ ಮತ್ತು ಅಭಿಯೋಜನೆಯವರು ಸದರಿ ಸಾಕ್ಷಿಯ ಮೂಲಕ ಆರೋಪಿತರ ದೋಷಾರೋಪಣಾ ಪಟ್ಟಿಯಲ್ಲಿ ನಮೂದಿಸಿರುವಂತಹ ಅಪರಾಧಗಳನ್ನು ಎಸಗಿರುತ್ತಾರೆಂದು ಸಂಶಯತೀತವಾಗಿ ರುಜುವಾತುಪಡಿಸುವಲ್ಲಿ ವಿಫಲರಾಗಿರುತ್ತಾರೆ. ಆದುದರಿಂದ ಅಂಶ 1 ರಿಂದ 3 ಅನ್ನು ನಕಾರಾತ್ಮಕವಾಗಿ ಈ ನ್ಯಾಯಾಲಯವು

ಉತ್ತರಿಸಿರುತ್ತದೆ.

**12. ಅಂಶ 4-** ಈ ಮೇಲೆ ಚರ್ಚಿಸಲ್ಪಟ್ಟ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಿರುತ್ತದೆ.

ಃಃ ಆದೇಶ ಃಃ

ಬಿ.ಎನ್ಎಸ್.ಎಸ್ ಕಲಂ.271(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಉಪಯೋಗಿಸಿ ಭಾ.ನ್ಯಾ.ಸಂ.ಕಲಂ.352, 115(2), 74 ಸಹಲಂ 3(5) ರ ಅಡಿಯಲ್ಲಿ ಅಡಿಯಲ್ಲಿ ಮಾಡಲಾದ ಆರೋಪಗಳಿಗೆ ಆರೋಪಿತರನ್ನು ನಿರ್ದೋಷಿಗಳೆಂದು ತೀರ್ಮಾನಿಸಿ ಖುಲಾಸೆಗೊಳಿಸಿರುತ್ತದೆ.

ಆರೋಪಿತರು ಮತ್ತು ಜಾಮೀನುದಾರರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆಗಳನ್ನು ರದ್ದುಪಡಿಸಲಾಗಿದೆ.

ಆರೋಪಿತರು ಮತ್ತು ಜಾಮೀನುದಾರರು ಬಿ.ಎನ್.ಎಸ್.ಎಸ್ ಕಲಂ.**481** ಷರತ್ತನ್ನು ಪೂರ್ಣಗೊಳಿಸುವ ಸಲುವಾಗಿ ಬರೆದುಕೊಟ್ಟ ಜಾಮೀನು ಮುಚ್ಚಳಿಕೆಗಳನ್ನು 6 ತಿಂಗಳ ಕಾಲ ಚಾಲ್ತಿಯಲ್ಲಿಡಲಾಗಿರುತ್ತದೆ.

ಅದೇ ರೀತಿ ಆರೋಪಿತರು ಇಂದಿನಿಂದ ಸ್ವತಂತ್ರರಿರುತ್ತಾರೆ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ಕೊಟ್ಟು ಬೆರಳಚ್ಚಿಸಿ, ನಂತರ ನಾನು ಅದನ್ನು ಓದಿ ತಪ್ಪುಗಳನ್ನು ತಿದ್ದಿ ನಂತರ ಈ ದಿನ ಅಂದರೆ ದಿನಾಂಕ 04ನೇ ಜುಲೈ ಮಾಹೆ 2026 ನೇ ಇಸವಿಯಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿರುತ್ತೇನೆ).

(ಹನುಮಂತರಾಯಪ್ಪ.ಬಿ.ಆರ್)
ಅಪರ ಸಿವಿಲ್ ನ್ಯಾಯಾಧೀಶರು
ಪ್ರ.ದ.ನ್ಯಾ.ದಂಡಾಧಿಕಾರಿರವರು, ಹೊಳಲ್ಕೆರೆ

ಃಃ ಅನುಬಂಧಗಳ ಪಟ್ಟಿ ಃಃ

ಅಭಿಯೋಜನ ಪಕ್ಷದ ಪರ ವಿಚಾರಣೆ ಮಾಡಿದ ಸಾಕ್ಷಿದಾರರ ಪಟ್ಟಿಃ

ಪ್ರಾಸಾ.1/ಚಾಸಾ-1 ಃ ಕಮಲಮ್ಮ

ಆರೋಪಿ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ಪಟ್ಟಿಃ

- ಇಲ್ಲಾ -

ಅಭಿಯೋಜನ ಪಕ್ಷದವರ ಪರ ನಿಶಾನಿಸಲಾದ ದಾಖಲಾತಿಗಳ ಪಟ್ಟಿಃ

ನಿಪಿ.1 ः ದೂರು
ನಿಪಿ.2 ः ಸ್ಥಳ ಮಹಜರ್
ನಿಪಿ.3 ः ಪ್ರಾಸಾ-1 ರವರ ಹೇಳಿಕೆ

ಅಭಿಯೋಜನ ಪಕ್ಷದವರ ಪರ ನಿಶಾನಿಸಲಾದ ಮುದ್ದೆ ಮಾಲುಗಳ ಪಟ್ಟಿಃ

- ಇಲ್ಲಾ -

ಅಪರ ಸಿವಿಲ್ ನ್ಯಾಯಾಧೀಶರು
ಪ್ರ.ದ.ನ್ಯಾ.ದಂಡಾಧಿಕಾರಿರವರು, ಹೊಳಲ್ಕೆರೆ

HANUMANTHARAYAPPA B R
Digitally signed by HANUMANTHARAYAPPA B R
Date: 2026.07.07 09:39:15 +0530